**ಸಾಕ್ಷಿಯನ್ನು ದಿನಾಂಕ 31.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜೆ ಎಮ್ ವಕೀಲರಿಂದಃ**

ನಾವು ನಮ್ಮ ತಂದೆಗೆ 3 ಜನ ಹೆಣ್ಣು ಮಕ್ಕಳು ಗಂಡು ಮಕ್ಕಳು ಇಲ್ಲ ಎಂದರೆ ನಿಜಾ. ನನ್ನ ತಂದೆ ಕೆ ಎಸ್ ಆರ್ ಟಿ ಸಿ ಕಂಡೆಕ್ಟರ್ ಆಗಿದ್ದರು. ನನ್ನ ತಂದೆ ನಮ್ಮನ್ನು ಚೆನ್ನಾಗಿ ಓದಿಸಿ ಬೆಳೆಸಿದ್ದಾರೆ ಎಂದರೆ ನಿಜಾ. ನನ್ನ ತಂದೆ ನಮಗೆ ಕೇಳಿದ್ದನ್ನು ಕೊಡಿಸಿ ಬೆಳೆಸಿದ್ದಾರೆ ಎಂದರೆ ಅವರ ಕೈಲಾದಷ್ಟು ಬೆಳೆಸಿದ್ದಾರೆ ಎಂದು ಹೇಳುತ್ತಾರೆ. ಆರೋಪಿ ಎಸ್ ಎಸ್ ಎಲ್ ಸಿ ವರೆಗೂ ಓದಿರುತ್ತಾರೆ. ನಾನು ಮತ್ತು ಹೇಮಲತಾ ಚೆನ್ನಾಗಿ ಓದಿದ್ದೇವೆ ಆದರೆ ಪಲ್ಲವಿ 10 ನೇ ತರಗತಿ ವರೆಗೆ ಓದಿದ್ದರು. ಪಲ್ಲವಿ 10 ನೇ ತರಗತಿ ಪೇಲ್ ಆಗಿ ನಂತರ ಪರೀಕ್ಷೆ ಕಟ್ಟಲು ಇಷ್ಟವಿಲ್ಲದೇ ಓದುವುದನ್ನು ಬಿಟ್ಟಿದ್ದಳು. ಅವಳು ಸ್ನೇಹಿತರ ಜೊತೆ ಓಡಾಡುತ್ತಿದ್ದರಿಂದ ಮನೆಯಲ್ಲಿ ಅವಳಿಗೆ ಶಾಲೆ ಬಿಡಿಸಿದ್ದರು ಎಂದರೆ ಸರಿಯಲ್ಲ. ಶಾಲೆ ಬಿಟ್ಟಾಗ ಪಲ್ಲವಿಗೆ ಎಷ್ಟು ವಯಸ್ಸು ಎಂದು ಗೊತ್ತಿಲ್ಲ. ಪಲ್ಲವಿ ಪ್ರೀತಿ ಪ್ರೇಮ ಎಂದು ಬೇರೆ ಹುಡುಗರ ಜೊತೆ ಓಡಾಡುತ್ತಿದ್ದರಿಂದ ಶಾಲೆ ಬಿಡಿಸಿದ್ದರು ಎಂದರೆ ಸರಿಯಲ್ಲ. ಶಾಲೆ ಬಿಟ್ಟು ಎಷ್ಟು ವರ್ಷಕ್ಕೆ ಪಲ್ಲವಿ ಮದುವೆಯಾಗಿತ್ತು ಎಂದು ಗೊತ್ತಿಲ್ಲ.

ಮದುವೆ ಕಾಲಕ್ಕೆ ಆರೋಪಿ ಕೋರಿಯರ್ ಕೆಲಸ ಮಾಡುತ್ತಿದ್ದ. ಮದುವೆ ಕಾಲಕ್ಕೆ ಆರೋಪಿ ಆತನ ತಾಯಿ ಎನ್ ಆರ್ ಮೊಹಲ್ಲಾದಲ್ಲಿ ವಾಸ ಇದ್ದರು. ಆದರೆ ಆ ಮನೆಯ ವಿಳಾಸ ಗೊತ್ತಿಲ್ಲ. ಮದುವೆ ಕಾಲಕ್ಕೆ ನಾನು ಆರೋಪಿ ಮನೆಗೆ ಹೋದ ಬಗ್ಗೆ ನೆನಪಿಲ್ಲ. ನಾನು ಆ ಮನೆಗೆ ಹೋಗೆ ಇಲ್ಲ ಎಂದರೆ ನೆನಪಿಲ್ಲ. ಮದುವೆಯಾಗಿ

ಅಂದಾಜು 1 ವರ್ಷದ ವರೆಗೆ ಪಲ್ಲವಿ ಮತ್ತು ಆರೋಪಿ ಎನ್ ಆರ್ ಮೊಹಲ್ಲಾದಲ್ಲಿ ವಾಸ ಇದ್ದರು. ನಂತರ ಎಲ್ಲಿಗೆ ಮನೆ ಬದಲಾಯಿಸಿದ್ದರು ಎಂದು ಗೊತ್ತಿಲ್ಲ. ಅವರು ಮಹದೇವಪುರ, ಬುಗತ್ತಹಳ್ಳಿ ಮತ್ತು ವರುಣಾದಲ್ಲಿ ಮನೆ ಮಾಡಿದ್ದು ಮಾತ್ರ ಗೊತ್ತಿದ್ದೆ, ಇನ್ನೆರಡು ಕಡೆಗೆ ಮನೆ ಮಾಡಿದ್ದರು ಅದರ ಬಗ್ಗೆ ಗೊತ್ತಿಲ್ಲ. ಮದುವೆಯಾಗಿ 3 ವರ್ಷಕ್ಕೆ ಪಲ್ಲವಿ ಗರ್ಭಿಣಿಯಾಗಿದ್ದರು. ಗರ್ಭಿಣಿಯಾಗಿದ್ದಾಗ ಅವರು ಬುಗತ್ತಹಳ್ಳಿ ಮನೆಯಲ್ಲಿ ವಾಸ ಇದ್ದರು. ನಾನು ಮಹದೇವಪುರ, ಬುಗತ್ತಹಳ್ಳಿ ಮನೆಗೆ ಹೋಗಿಲ್ಲ. ಗರ್ಭಿಣಿಯಾದ ಬಳಿಕ ಪಲ್ಲವಿ ನನ್ನ ತಾಯಿ ಮನೆಯಲ್ಲಿ ವಾಸ ಇದ್ದರು. ಆ ಕಾಲಕ್ಕೆ ನಾನು ಕೆ ಜಿ ಕೊಪ್ಪಲು ಜಯನಗರದಲ್ಲಿ ವಾಸ ಇದ್ದೆ.

ನಾವು 3 ವರ್ಷಗಳ ವರೆಗೆ ಅಲ್ಲಿ ವಾಸ ಇದ್ದೆವು. ನಂತರ 1 ವರ್ಷ ವರುಣ, 1 ವರ್ಷ ಚಿಕ್ಕ ಹರದನಹಳ್ಳಿಯಲ್ಲಿ ವಾಸ ಇದ್ದು ನಂತರ ಸಿದ್ದಾರ್ಥ ಲೇಔಟಗೆ ಹೋಗಿದ್ದೆವು. ವರುಣಾ ಗ್ರಾಮದಲ್ಲಿ ನನ್ನ ಗಂಡನ ತಂದೆಯ ಮನೆಯಲ್ಲಿ ವಾಸ ಇದ್ದೆವು. ಸಿದ್ದಾರ್ಥ ಲೇಔಟನಲ್ಲಿ ವಾಸ ಇದ್ದ ಇಸವಿ ನೆನಪಿಲ್ಲ. ನಾನು ಪಲ್ಲವಿ ಮನೆಗೆ ಆಗಾಗ ಹೋಗುತ್ತಿರಲಿಲ್ಲ. ಪಲ್ಲವಿ ಮತ್ತು ಅವಳ ಗಂಡ ಚೆನ್ನಾಗಿ ಇರಲಿಲ್ಲ. ಆರೋಪಿ ಏನನ್ನು ತಂದು ಕೊಡದೇ ಇರುವುದರಿಂದ, ಮಗುವನ್ನು ಚೆನ್ನಾಗಿ ನೋಡಿಕೊಳ್ಳದೇ ಇರುವುದರಿಂದ ಮತ್ತು ತನ್ನ ತಾಯಿ ಜೊತೆ ಆಗಾಗ ಜಗಳ ಮಾಡುತ್ತಿರುವುದರಿಂದ ಆರೋಪಿಗೂ ಪಲ್ಲವಿಗೂ ಆಗಾಗ ಜಗಳ ಆಗುತ್ತಿತ್ತು. ಪಲ್ಲವಿ ಮದುವೆಗೂ ಮುಂಚೆ ಗಾಡಿ ಓಡಿಸುವುದು ಕಲಿತ್ತಿದ್ದಳು. ಮದುವೆ ಬಳಿಕ ಅವಳೇ ಗಾಡಿ ಖರೀದಿ ಮಾಡಿದ್ದಳು. ಪಲ್ಲವಿ ಮದುವೆಗೂ ಮುಂಚೆ ಟೇಲರಿಂಗ್ ಕಲಿಯಲು ಹೋಗುತ್ತಿದ್ದಳು. ಮದುವೆಗೂ ಮುಂಚೆ ಸ್ವಲ್ಪ ಕಲಿತ್ತಿದ್ದಳು, ಮಗು ಆದ ಬಳಿಕ ಮನೆ ಕಟ್ಟಲು ಪ್ರಾರಂಭಿಸಿದ ನಂತರ ಪುನಃ ಟೇಲರಿಂಗ್ ಕಲಿಯಲು ಹೋಗುತ್ತಿದ್ದಳು. ಅವಳು ಚಾಮುಂಡಿ ಬೆಟ್ಟದ ಬಳಿ ಟೇಲರಿಂಗ್ ಕಲಿಯುತ್ತಿದ್ದಳು ಆದರೆ ಎಲ್ಲಿ ಎಂದು ನಿಖರವಾಗಿ ಗೊತ್ತಿಲ್ಲ.

ಪಲ್ಲವಿ ಅಗ್ರಹಾರದಲ್ಲಿ ಟೇಲರಿಂಗ್ ಕಲಿಯುತ್ತಿದ್ದ ಬಗ್ಗೆ ಗೊತ್ತಿಲ್ಲ. ಟೇಲರಿಂಗ್ ಕಲಿಯಲು ಬಸ್ ನಲ್ಲಿ ಹೋಗುತ್ತಿದ್ದಳು. ಆ ಕಾಲಕ್ಕೆ ಅವಳ ಬಳಿ ಸ್ಕೂಟರ್ ಇತ್ತು ಆದರೆ ಪೆಟ್ರೋಲ್ ಹಾಕಿಸಲು ಹಣ ಇಲ್ಲದ ಕಾರಣ ಬಸ್ ನಲ್ಲಿ ಹೋಗುತ್ತಿದ್ದಳು. ನನ್ನ ಗಂಡ ಪಲ್ಲವಿಯನ್ನು ಬೈಕ್ ಮೇಲೆ ಕರೆದುಕೊಂಡು ಬಂದಾಗ ಗಲಾಟೆ ಆಗಿದ್ದ ದಿನಾಂಕ ಗೊತ್ತಿಲ್ಲ. ಆ ದಿನ ನಾನೇ ಪಲ್ಲವಿಯನ್ನು ಕರೆದುಕೊಂಡು ಬರಲು ನನ್ನ ಗಂಡನಿಗೆ ಹೇಳಿದ್ದೆ. ಅದಕ್ಕೂ ಒಂದು ವಾರ ಮುಂಚೆ ಪಲ್ಲವಿ ನನಗೆ ಬಸ್ ಚಾರ್ಜ್ ಗೆ ಹಣ ಇಲ್ಲ ಎಂದು ಹೇಳಿದ್ದರಿಂದ, ಮನೆಗೆ ಕರೆಯಿಸಿ ವಿಚಾರಿಸೋಣ ಮತ್ತು ಸ್ವಲ್ಪ ಹಣ ಕೊಡೋಣ ಎಂದು ನನ್ನ ಗಂಡನಿಗೆ ಕರೆದುಕೊಂಡು ಬರಲು ಹೇಳಿದ್ದೆ. ಪೊಲೀಸರ ಮುಂದೆ ಆ ಬಗ್ಗೆ ಹೇಳಿದ್ದ ಬಗ್ಗೆ ನೆನಪಿಲ್ಲ. ಆ ಕಾಲಕ್ಕೆ ಆರೋಪಿಗೂ ನನ್ನ ಗಂಡನಿಗೂ ಜಗಳ ನಡೆದ ಸ್ಥಳದ ಬಗ್ಗೆ ಗೊತ್ತಿಲ್ಲ. ಆ ಗಲಾಟೆ ಬಗ್ಗೆ ನನ್ನ ಗಂಡ ದೂರು ಕೊಟ್ಟಿಲ್ಲ. ಸಿದ್ದಾರ್ಥ ಲೇಔಟ್ ನಲ್ಲಿ ವಾಸ ಇದ್ದಾಗ ನಾನು ಹೆಚ್ಚಾಗಿ ತಾಯಿಯ ಮನೆಯಲ್ಲಿ ಇರುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಗಂಡನ ಬಳಿ KA-09-MH-3036 ನೆಕ್ಸಾನ್ ಬಿಳಿ ಕಾರು ಇತ್ತು ಎಂದರೆ ನಿಜಾ. ನನ್ನ ಗಂಡ ಪಲ್ಲವಿಯನ್ನು ಕಾರನಲ್ಲಿ ನಮ್ಮ ಮನೆಗೆ ಕರೆದುಕೊಂಡು ಬಂದಿದ್ದ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಪಲ್ಲವಿ ಆ ಕಾರಿನಲ್ಲಿ ಎಲ್ಲಾ ಕಡೆಗೆ ಸುತ್ತುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ಗಂಡನಿಗೂ ಆರೋಪಿಗೂ ಗಲಾಟೆ ಆಗಿದ್ದ ದಿನ ನಾನು ಸಿದ್ದಾರ್ಥ ಲೇಔಟ್ ನ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಗಂಡ ಮತ್ತು ಪಲ್ಲವಿ ಇಬ್ಬರೇ ಆ ಮನೆಗೆ ಹೋಗಿದ್ದರು ಎಂದರೆ ಸರಿಯಲ್ಲ. ಅವರಿಬ್ಬರ ನಡುವೆ ಸಂಬಂಧ ಇದ್ದಿದ್ದರಿಂದ ಆರೋಪಿ ಕೈಗೆ ಸಿಕ್ಕಿಹಾಕಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಬಗ್ಗೆ ನಮ್ಮ ಮನೆಯಲ್ಲಿ ನ್ಯಾಯ ಪಂಚಾಯ್ತಿ ಆಗಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ನನ್ನ ಗಂಡ ಮತ್ತು ತಂದೆ ಆರೋಪಿಗೆ ವರದಕ್ಷಿಣೆ ಕೇಸ್ ಹಾಕುವುದಾಗಿ ಹೆದರಿಸಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕೆ ಆರೋಪಿ ಹೆದರಿ ಮನೆಬಿಟ್ಟು ಹೋಗಿದ್ದ ಎಂದರೆ

ಸರಿಯಲ್ಲ. ಆರೋಪಿ ತನ್ನ ಜಮೀನು ಮಾರಿ ಬಂದ ಹಣದಿಂದ ಮನೆ ಕಟ್ಟಲು ಪ್ರಾರಂಭಿಸಿದ್ದ ಎಂದರೆ ಜಮೀನು ಮಾರಿದ್ದು ನಿಜಾ ಆದರೆ ಆ ಹಣದಿಂದ ಮನೆ ಕಟ್ಟಲು ಪ್ರಾರಂಭಿಸಿರಲಿಲ್ಲ. ಜಮೀನು ಮಾರಿ ಬಂದ ಹಣವನ್ನು ಆರೋಪಿ ಸಾಲ ತೀರಿಸಲು ಉಪಯೋಗಿಸಿದ್ದ. ನನ್ನ ತಾಯಿ ಮನೆ ಕಟ್ಟಲು ಪ್ರಾರಂಭಿಸಿದ್ದರು. ಮನೆ ಕಟ್ಟಲು ಪಡೆದಿದ್ದ ಸಾಲವನ್ನು ಆರೋಪಿ ಮನೆಬಿಟ್ಟು ಹೋದ ಬಳಿಕ ನಾವು ಮನೆ ಕಟ್ಟಲು ಉಪಯೋಗಿಸಿದ್ದೆವು.

ಸಾಲದ ಹಣ ಆರೋಪಿ ಖಾತೆಗೆ ಬಂದಿತ್ತು ನಂತರ ಆರೋಪಿ ಅದನ್ನು ನನ್ನ ತಂಗಿಯ ಖಾತೆಗೆ ವರ್ಗಾಯಿಸಿದ್ದ, ತಾರಸಿ ತನಕ ಕಟ್ಟುವ ತನಕ ಆರೋಪಿ ವರುಣಾದಲ್ಲಿ ವಾಸ ಇದ್ದ ನಂತರ ಆತನ ತಾಯಿ ಮರಣ ಹೊಂದಿದ ನಂತರ ಮನೆಬಿಟ್ಟು ಹೋಗಿದ್ದ. ತಾರಸಿ ಕಟ್ಟುವ ಕಾಲಕ್ಕೆ ನನ್ನ ಗಂಡನಿಗೂ ಆರೋಪಿಗೂ ಗಲಾಟೆ ಆಗಿತ್ತು ಎಂದರೆ ನಿಜಾ. ಆರೋಪಿ ಮನೆಬಿಟ್ಟು ಹೋದ ಬಗ್ಗೆ ದೂರು ಕೊಟ್ಟಿಲ್ಲ. ಆ ಕಾಲಕ್ಕೆ ಆರೋಪಿಯನ್ನು ಪತ್ತೆ ಮಾಡಲು ಪ್ರಯತ್ನ ಮಾಡಿದ್ದೆವು ಆಗ ಆರೋಪಿ ನನ್ನ ಮಾವಂದಿರ ಜೊತೆ ಸಂಪರ್ಕದಲ್ಲಿ ಇದ್ದ. ಆಗ ಆರೋಪಿ ಎಲ್ಲೋ ಒಂದು ಕಡೆ ರೂಮ ಮಾಡಿಕೊಂಡು ಇದ್ದ. ಗೃಹಪ್ರವೇಶದ ಕಾಲದಲ್ಲಿ ಆರೋಪಿಯನ್ನು ಕರೆಸಿರುವುದಿಲ್ಲ. ವಿಳಾಸ ಗೊತ್ತಿಲ್ಲದೇ ಇರುವ ಕಾರಣ ಮತ್ತು ನಮಗೆ ಇಷ್ಟ ಇಲ್ಲದೇ ಇರುವ ಕಾರಣಕ್ಕೆ ಕರೆಸಿರುವುದಿಲ್ಲ. ಪಲ್ಲವಿಗೂ ಸಹ ಆರೋಪಿ ಬರುವುದು ಇಷ್ಟ ಇರಲಿಲ್ಲ ಎಂದರೆ ನಿಜಾ. ಪಲ್ಲವಿಗೂ ಸಹ ಆರೋಪಿ ಮೇಲೆ ಪ್ರೀತಿ ಇರಲಿಲ್ಲ ಎಂದರೆ ಆ ಸಮಯದಲ್ಲಿ ಇರಲಿಲ್ಲ.

ಪಲ್ಲವಿ ಮದುವೆ ಕಾಲಕ್ಕೆ ನಾನು ಬಿ ಇ ಪದವಿ ಓದುತ್ತಿದ್ದೆ. ತೊಂದರೆ ಆದಾಗ ಪೊಲೀಸ್ ದೂರು ಕೊಡಬೇಕು ಎಂದು ನನಗೆ ಗೊತ್ತಿತ್ತು ಎಂದರೆ ನಿಜಾ. ಪಲ್ಲವಿ ಸಾಯುವವರೆಗೆ ಆರೋಪಿ ವಿರುದ್ದ ದೂರು ಕೊಟ್ಟಿಲ್ಲ ಎಂದರೆ ನಿಜಾ. ಆರೋಪಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎನ್ನುವ ಕಾರಣಕ್ಕೆ ದೂರು ಕೊಟ್ಟಿಲ್ಲ ಎಂದರೆ

ಸರಿಯಲ್ಲ. ಗೃಹಪ್ರವೇಶ ಆದ ಬಳಿಕ ಪಲ್ಲವಿ ಅವರ ಮಗು, ನನ್ನ ತಾಯಿಯ ತಂದೆ, ತಾಯಿಗಳು ಆ ಮನೆಯಲ್ಲಿ ವಾಸ ಇದ್ದರು. ಪಲ್ಲವಿ ಗರ್ಭಿಣಿ ಯಾದಾಗಿನಿಂದ ಗೃಹಪ್ರವೇಶ ಆಗುವವರೆಗೂ ನನ್ನ ತಾಯಿಯ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ. ಹೇಮಲತಾ ಅವರ ಮದುವೆ ಕಾಲಕ್ಕೆ ಆರೋಪಿಯನ್ನು ಕರೆಸಿಲ್ಲ. ಆ ಕಾಲಕ್ಕೆ ಆರೋಪಿ ಎಲ್ಲಿ ಇದ್ದಾನೆ ಎಂದು ನನ್ನ ಮಾವಂದಿರಿಗೆ ಗೊತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಗೃಹಪ್ರವೇಶ ಆದ ಎಷ್ಟು ದಿನಗಳ ಬಳಿಕ ಹೇಮಲತಾ ಅವರ ಮದುವೆ ಆಗಿದೆ ಎಂದರೆ ಗೊತ್ತಿಲ್ಲ. ಆರೋಪಿ ಎಲ್ಲಿ ಇದ್ದಾನೆ ಎಂದು ಗೊತ್ತಿದ್ದರು ಸಹ ಅವನು ಬಡವ ಎನ್ನುವ ಕಾರಣಕ್ಕೆ ಮದುವೆಗೆ ಕರೆದಿರಲಿಲ್ಲ ಎಂದರೆ ಸರಿಯಲ್ಲ.

**ಈವರೆಗೆ ನ್ಯಾಯಾಲಯದ ಸಮಯ ಮುಕ್ತಾಯವಾಗಿದ್ದರಿಂದ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು